# ಗಾಂಧಿನಗರ ಪೋಸ್ಟ್



## ಅಪ್ಪು ಡಾನ್ಸ್...

'ರಾಜ್‌ಕುಮಾರ' ಸಿನಿಮಾ ಕಳೆದ ವಾರವಷ್ಟೇ ನೂರು ದಿನಗಳ ಪ್ರದರ್ಶನ ಕಂಡಿದೆ. 2017ರ ಮೊದಲ ಭಾಗದಲ್ಲಿ ಕನ್ನಡ ಚಿತ್ರರಂಗದಲ್ಲಿ ಸಂಚಲನೆ ಮೂಡಿಸಿದ 'ರಾಜ್‌ಕುಮಾರ', ಗಳಿಕೆಯಲ್ಲಿ ಹೊಸದೊಂದು ಮೈಲುಗಲ್ಲು ದಾಖಲಿಸಿರುವ ಸಿನಿಮಾ. ಈ ಸಿನಿಮಾದ ಯಶಸ್ಸಿನ ಬೆನ್ನಿಗೆ ಪುನೀತ್ ಹೊಸ ಸಿನಿಮಾ 'ಅಂಜನಿಪುತ್ರ'ದ ಬಗ್ಗೆ ನಿರೀಕ್ಷೆಗಳು ಹೆಚ್ಚುತ್ತಿವೆ.


'ಅಂಜನಿಪುತ್ರ' ಹರ್ಷ ನಿರ್ದೇಶನದ ಸಿನಿಮಾ. ಈ ಮೊದಲು ಶಿವರಾಜ್‌ಕುಮಾರ್ ಅವರ 'ಭಜರಂಗಿ', 'ವಜ್ರಕಾಯ' ಸಿನಿಮಾಗಳನ್ನು ನಿರ್ದೇಶಿಸಿ ಯಶಸ್ಸು ಕಂಡಿದ್ದ ಹರ್ಷ, ಇದೀಗ ಪುನೀತ್‌ಗೆ 'ಅಂಜನಿಪುತ್ರ'ದ ಪೋಷಾಕು ತೊಡಿಸಿದ್ದಾರೆ. ಈ ಚಿತ್ರದಲ್ಲೂ ನಾಟಕೀಯ ಅಂಶಗಳು ಸಾಕಷ್ಟಿದ್ದು, ಪ್ರೇಕ್ಷಕರಿಗೆ ಭರಪೂರ ಮನರಂಜನೆ ದೊರೆಯಲಿದೆ ಎಂದು ಚಿತ್ರತಂಡ ಹೇಳುತ್ತಿದೆ.



'ರಾಜ್‌ಕುಮಾರ' ಚಿತ್ರದ ವಿಶೇಷಗಳಲ್ಲಿ ಪುನೀತ್‌ರ ಮೋಹಕ ನೃತ್ಯವೂ ಒಂದು. ಇತ್ತೀಚಿನ ಸಿನಿಮಾಗಳಲ್ಲಿ ಪುನೀತ್‌ರ ನೃತ್ಯ ಪ್ರತಿಭೆ ಸರಿಯಾಗಿ ಬಳಕೆಯಾಗಿರಲಿಲ್ಲ ಎನ್ನುವ ಕೊರಗನ್ನು 'ರಾಜ್‌ಕುಮಾರ' ನೀಗಿಸಿತ್ತು. ಈಗ 'ಅಂಜನಿಪುತ್ರ'ದಲ್ಲೂ ಕುಣಿತಕ್ಕೆ ಸಾಕಷ್ಟು ಒತ್ತು ನೀಡಲಾಗಿದೆಯಂತೆ. ಹರ್ಷ ಅವರು ನೃತ್ಯ ಸಂಯೋಜಕರೂ ಆಗಿರುವುದರಿಂದ ಚಿತ್ರದ ಗೀತೆಗಳ ಬಗ್ಗೆ ಅಪ್ಪು ಅಭಿಮಾನಿಗಳ ಕುತೂಹಲ ಸಾಕಷ್ಟಿದೆ. ನಾಯಕನನ್ನು ಪರಿಚಯಿಸುವ ವಿಶೇಷ ಗೀತೆಯಲ್ಲಿ ನಟಿ ಹರಿಪ್ರಿಯಾ ಅವರು ಕಾಣಿಸಿಕೊಂಡಿರುವುದು ಈಗಾಗಲೇ ಸುದ್ದಿಯಾಗಿದೆ.

'ಕಿರಿಕ್ ಪಾರ್ಟಿ'ಯ ಚೆಲುವೆ ರಶ್ಮಿಕಾ ಮಂದಣ್ಣ 'ಅಂಜನಿಪುತ್ರ'ನಿಗೆ ನಾಯಕಿ. ರಮ್ಯಾಕೃಷ್ಣ, ಚಿಕ್ಕಣ್ಣ, ರವಿಶಂಕರ್ ತಾರಾಗಣದಲ್ಲಿರುವ ಪ್ರಮುಖರು.

## ಮೊಟ್ಟೆಗೊಂದು ಕಾಲ!



ಬೋಳು ತಲೆಯವರನ್ನು 'ಬಾಂಡ್ಲಿ', 'ಮೊಟ್ಟೆ' ಎಂದು ತಮಾಷೆ ಮಾಡುವುದಿದೆ. ಮಿರಮಿರ ಮಿಂಚುವ ಈ ಬೋಳು ತಲೆಯೇ ಚಿತ್ರದ ಕೇಂದ್ರವಾದರೆ ಹೇಗೆ? ಇಂಥದ್ದೊಂದು ವಿಶೇಷ ಪ್ರಯತ್ನದ ಸಿನಿಮಾ – 'ಒಂದು ಮೊಟ್ಟೆಯ ಕಥೆ'.

ರಾಜ್ ಬಿ. ಶೆಟ್ಟಿ ನಿರ್ದೇಶನದ 'ಮೊಟ್ಟೆಯ ಕಥೆ' ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ. ಕರ್ನಾಟಕದಲ್ಲಿ ಚಿತ್ರರಸಿಕರ ಎದುರು ಬರುವ ಮೊದಲೇ ವಿವಿಧ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡ ಅಗ್ಗಳಿಕೆ ಈ ಚಿತ್ರದ್ದು. ನಿರ್ದೇಶನದ ಜೊತೆಗೆ ಚಿತ್ರದ ಮುಖ್ಯ ಪಾತ್ರದಲ್ಲೂ ರಾಜ್ ಶೆಟ್ಟಿ ಕಾಣಿಸಿಕೊಂಡಿದ್ದಾರೆ. ಅವರು ಕೂಡ ಬೋಳು ತಲೆಯವರ ಸಂಘಕ್ಕೆ ಸೇರಿದವರಾದುದರಿಂದ ಬೇರೆ ಕಲಾವಿದನನ್ನು ಹುಡುಕುವ ಕಷ್ಟ ಚಿತ್ರತಂಡಕ್ಕೆ ಎದುರಾಗಿಲ್ಲ. ನಾಯಕ ಪಾತ್ರ ಬಯಸುತ್ತಿದ್ದ ಬೋಳು ತಲೆ, ಸಪೂರ ದೇಹ ಹಾಗೂ ನಿರರ್ಗಳವಾಗಿ ಕನ್ನಡ ಮಾತನಾಡುವ ಗುಣಗಳೆಲ್ಲ ಇದ್ದುದು ಕೂಡ ಅವರ ನಟಿಸುವ ತೀರ್ಮಾನಕ್ಕೆ ಪೂರಕವಾಗಿದೆ. ಮಂಗಳೂರು ಕನ್ನಡ ಭಾಷೆಯ ಬಳಕೆ ಚಿತ್ರದ ವಿಶೇಷಗಳಲ್ಲೊಂದಂತೆ.

ಜನಾರ್ದನ ಎನ್ನುವ ಕನ್ನಡ ಮೇಷ್ಟರ ತವಕತಲ್ಲಣಗಳು ಹಾಗೂ ವಿದ್ಯಾರ್ಥಿಗಳಿಂದ ಅವರು ಎದುರಿಸುವ ಸಂಕಷ್ಟಗಳು ಚಿತ್ರದ ಕಥೆ. ರಾಜ್ ಶೆಟ್ಟಿ ಸುರತ್ಕಲ್‌ನವರು. ಸಿನಿಮಾ ರೂಪಿಸುವ ಆಸೆ ಹೊತ್ತ ಅವರು, 'ಸುಮ್ನೆ ನಮಗ್ಯಾಕೆ' ಹಾಗೂ '5 ಲೆಟರ್' ಎನ್ನುವ ಕಿರುಚಿತ್ರಗಳನ್ನು ರೂಪಿಸಿದ್ದಾರೆ. 'ಒಂದು ಮೊಟ್ಟೆಯ ಕಥೆ' ಮೂಲಕ ಸಿನಿಮಾ ನಿರ್ದೇಶಕರಾಗಿರುವುದು ಮಾತ್ರವಲ್ಲ, ಚೊಚ್ಚಲ ಸಿನಿಮಾದಲ್ಲೇ ಕರ್ನಾಟಕದಾಚೆಯ ಪ್ರೇಕ್ಷಕರ ಗಮನವನ್ನೂ ಸೆಳೆದಿರುವುದು ವಿಶೇಷ.